ಸ್ವತಹ ಗ್ಯಾನಿಗೆ ತನ್ನ ಹೆಸರು ಜ್ಞಾನೋಬ ಎಂಬುದು ಮರೆತಿದ್ದಾಗ ಊರವರಿಗೆ ಅಚ್ಚರಿ ಹುಟ್ಟಿಸುವುದರಲ್ಲಿ ಹೊಸತೇನೂ ಇರಲಿಲ್ಲ.

ಗ್ಯಾನಿ ಮತ್ತು ಗುಲಾಬಿಯರು ತಮ್ಮ ತಮ್ಮ ನಿಜ ಹೆಸರಿನಿಂದ ಮರೆಯಾಗಿ ತಮ್ಮದೇ ವಿಶಿಷ್ಟ ಹೆಸರುಗಳನ್ನು, ಬದುಕನ್ನು, ಪ್ರೀತಿಯನ್ನು ಹಂಚಿಕೊಂಡು ಹೀಗೆಯೇ ಸಾಗುತ್ತಿರುವಾಗ ಒಂದು ಘಟನೆ ಸಂಭವಿಸಿತು. ಬೇಸಿಗೆ ದಿನವಾದ್ದರಿಂದ ಗ್ಯಾನಿ ಗುಲಾಬಿ ತುಕರಾಮಣ್ಣ ಹೊರಗೆ ಕಟ್ಟೆಯ ಮೇಲೆ ಮಲಗುತ್ತಿದ್ದರು. ಊರಲ್ಲಿ ಸಾಮಾನ್ಯವಾಗಿ ಎಲ್ಲರೂ ಹೊರಗೆ ಕಟ್ಟೆಮೇಲೋ ಅಂಗಳದಲ್ಲೋ ಮಲಗುವುದು ರೂಢಿ. ಹೀಗೆಯೇ ಎದುರಿನ ಮನೆಯ ನಿಂಗಣ್ಣನೂ ಹುಡುಗರನ್ನು ಹಾಕಿಕೊಂಡು ಅವರ ಕಟ್ಟೆ ಮೇಲೆ ಮಲಗುತ್ತಿದ್ದ. ಅವನ ಹೆಂಡತಿ ನಾಲ್ಕನೇ ಹೆರಿಗೆ ಬಾಣಂತನ ಮಾಡಲು ತೌರು ಮನೆಗೆ ಹೋಗಿದ್ದಳು. ಅಮವಾಸ್ಯೆ ಕಳೆದು ನಿಧಾನಕ್ಕೆ ಸ್ವಲ್ಪ ಸ್ವಲ್ಪವಾಗಿ ಚಂದ್ರ ಕಾಣಿಸಿಕೊಂಡು ಮರೆಯಾಗುತ್ತಿದ್ದ. ಹೀಗೆ ಒಂದು ದಿನ ಊರವರು ಉಂಡು ಮಲಗಿದ ಮೇಲೆ, ಹುಟ್ಟಿದ ಚಂದ್ರ ಮುಳುಗಿದ ಮೇಲೆ ಎದುರಿನ ಮನೆಯ ನಿಂಗಣ್ಣ ಕಾಮಾತುರನಾಗಿ ಕತ್ತಲಲ್ಲಿ ಎದ್ದು ಕುಳಿತ. ನಿಂಗಣ್ಣನಿಗೆ ನಡುವಯಸ್ಸು ದಾಟುತ್ತಾ ಬಂದಿದ್ದರೂ ಕಾಮ ಮಾತ್ರ ಜಾಸ್ತಿಯಾಗುತ್ತಾ ನಡೆದಿತ್ತು. ಎದ್ದು ಕುಳಿತವನು ಹತ್ತಡಿ ಅಂತರದ ಕಟ್ಟೆ ಮೇಲೆ ಮಲಗಿದ್ದ ಗುಲಾಬಿಯನ್ನು ನೆನೆಸಿಕೊಂಡ. ಗುಲಾಬಿ ಬಂದ ದಿನದಿಂದ ನಿಂಗಣ್ಣನೇ ಏಕೆ ಊರಿನ ಮುಕ್ಕಾಲು ಭಾಗ ಗಂಡಸರು ಅವಳ ಯೌವನ, ನಡಿಗೆ ಅಂದಚೆಂದಕ್ಕೆ ಮಾರುಹೋಗಿದ್ದರು. ಸಮಯ ಸಿಕ್ಕಾಗೆಲ್ಲಾ ನಿಂಗಣ್ಣ ಗುಲಾಬಿಯೊಂದಿಗೆ ಹರಟುತ್ತಿದ್ದ. ಅದೆಲ್ಲಾ ಜ್ಞಾಪಕಕ್ಕೆ ಬಂದು ಹೇಗೂ ತನ್ನ ಹೆಂಡತಿ ಬೇರೆ ಇಲ್ಲವೆಂದುಕೊಂಡು ಎದ್ದು ಅಂಗಳಕ್ಕೆ ಇಳಿದ. ಅಂಗಳದಲ್ಲಿದ್ದ ಗಾಡಿಗೆ ಆತು ನಿಂತು ಕತ್ತಲನ್ನು ಸೀಳಿ ಗುಲಾಬಿಗಾಗಿ ಹುಡುಕಿದ. ನಿಧಾನಕ್ಕೆ ಕತ್ತಲು ಮರೆಯಾಗಿ ಗ್ಯಾನಿ ಗುಲಾಬಿಯರು ಕಾಣತೊಡಗಿದ್ದರು. ಮಾರು ಮಾರು ಅಂತರದಲ್ಲಿ ಏನನ್ನೂ ಹೊದೆಯದೆ ಅವರಿಬ್ಬರು ಮಲಗಿದ್ದರು. ಗುಲಾಬಿಯ ಸೀರೆ ಮೊಣಕಾಲ ಮೇಲೆ ಹಾರಿತ್ತು. ನಿಂಗಣ್ಣ ನಿಧಾನಕ್ಕೆ ಗುಲಾಬಿ ಪಕ್ಕ ಬಂದು ಕುಳಿತುಕೊಂಡ. ಅವಳ ಪಕ್ಕ ಕೂತ ತಕ್ಷಣ ಏಕೋ ಭಯವಾಗಿ ಕೈಕಾಲು ಆಡಿಸದೆ, ಉಸಿರು ಬಿಗಿಹಿಡಿದು, 'ಗುಲಾಬಿ' ಅನ್ನಲು ಬಾಯಿ ತೆರೆದು ಅನ್ನಲಾಗದೆ ಕುತೂಹಲದ ಉನ್ಮತ್ತತೆಯಲ್ಲಿ ಕಾದ. ಗುಲಾಬಿ ನಿಧಾನಕ್ಕೆ ಒಂದು ಮಗ್ಗಲು ಹೊರಳಿಸಿ ಅರ್ಧ ಎಚ್ಚರಗೊಂಡಳು. ಏನೋ ಪಕ್ಕದಲ್ಲಿ ಕುಳಿತಿದೆಯೆನ್ನಿಸಿ ಹಾಗೆಯೇ ಕಣ್ಣುಬಿಟ್ಟಳು. ತಕ್ಷಣವೇ ಚಟ್ಟನೇ ಚೀರಿಕೊಂಡು ಅಬ್ಬಬ್ಬ... ಅಯ್ಯಪ್ಪಾ... ಅನ್ನಲು ತೊಡಗಿದಳು. ಕ್ಷಣದಲ್ಲಿ ನಿಂಗಣ್ಣನಿಗೆ ಏನು ಮಾಡುವುದೆಂದು ತೋಚದೆ ಮನೆಕಡೆ ಕಾಲು ಎತ್ತಿದ. ಅವನು ಕಾಲು ಬಿಡುತ್ತಿದ್ದಂತೆಯೇ ಗ್ಯಾನಿ, ತುಕರಾಮಣ್ಣರು ಎದ್ದು ಕುಳಿತುಕೊಂಡರು. ಚೀರುತ್ತಿದ್ದ ಗುಲಾಬಿ ತಟ್ಟನೆ ವಾಸ್ತವತೆ ಗೊತ್ತಾಗಿ ಸುಮ್ಮನಾಗಿಬಿಟ್ಟಳು. ಗ್ಯಾನಿಗೂ ತುಕರಾಮಣ್ಣರಿಗೂ ಸಹ ವಾಸ್ತವತೆ ಅರಿವಾಗಿತ್ತು. ಇತ್ತ ನಿಂಗಣ್ಣ ಇತರರು ಏಳುವುದರೊಳಗೆ, ಗುಲಾಬಿಗೆ ಗೊತ್ತಾಗುವುದರೊಳಗೆ ಹಾರಿ ಹೋಗಬೇಕೆಂದು ಮನೆಕಡೆ ಓಡುವಾಗ ಎದುರಿಗಿದ್ದ ಗಾಡಿಗೆ, ಡಿಕ್ಕಿ ಹೊಡೆದಿದ್ದ. ಭಾರಿ ಜೋರಿನ ಪ್ರಮಾಣದಲ್ಲಿ ಓಡುತ್ತಿದ್ದುದರಿಂದ ಒಂದು ಕಡೆಯ ಕಪಾಳ, ತೋಳುಗಳು ಕೆತ್ತಿ, ಕಣ್ಣು ಕೈಗಳು ಊದಿಕೊಂಡು ಅಲ್ಲೇ ಸ್ವಲ್ಪ ಹೊತ್ತು ಇದ್ದು ನಿಧಾನಕ್ಕೆ ತನ್ನ ಕಟ್ಟೆ ಹತ್ತಿದ. ಇದನ್ನೆಲ್ಲಾ ಸಿಟ್ಟು, ಭಯ, ಅವಮಾನಗಳಿಂದ ನೋಡುತ್ತಿದ್ದ ಗ್ಯಾನಿ ಎದ್ದು ನಿಂತು ಸೀದಾ ನಿಂಗಣ್ಣನ ಬಳಿಹೋಗಿ ನಿಂತುಕೊಂಡ. ನಿಂಗಣ್ಣನಿಗೆ ಮಾತಾಡಲು ಬಾಯಿ ಏಕೆ, ತೋರಿಸಲು ಮುಖವೂ ಇಲ್ಲದಂತಾಗಿತ್ತು. ಆ ಇಲ್ಲದ ಮುಖಕ್ಕೆ ಗ್ಯಾನಿ ಪಟಾರನೆ ಬಾರಿಸಿ, 'ನನ್ನ ದೊಡ್ಡಣ್ಣ ಅಂತ ತಿಳ್ಕಂಡಿದ್ದೆನಲ್ಲೋ ನಿಂಗಣ್ಣ! ಎಷ್ಟು ದಿನದಿಂದ ಕಾದಿದ್ಯೊ